"ನೋಡು, ಈ ಜಗತ್ತಿನಲ್ಲಿ ಪ್ರತಿಕ್ಷಣ ಏನೇನೋ ಸಂಭವಿಸುತ್ತಿರುತ್ತವೆ. ಇಂಥಹವು ಸಂಭವಿಸಬೇಕು, ಇಂಥಹವು ಸಂಭವಿಸಬಾರದೆಂಬ ಯಾವ ಮುಲಾಜು ಸೃಷ್ಟಿ ನಿಯಮಗಳಿಗಿಲ್ಲ. ನಿಜ ಹೇಳಬೇಕೆಂದರೆ ಯಾವುದೂ ಸತ್ಯವೂ ಅಲ್ಲ, ಯಾವುದೂ ಮಿಥ್ಯವೂ ಅಲ್ಲ. ಪ್ರತಿಯೊಂದು ಸಂಗತಿಗಳು ಏಕೆ ಸಂಭವಿಸುತ್ತವೆ, ಏಕೆ ಅನುಸಂಧಾನಗೊಳ್ಳುತ್ತವೆ ಎಂಬುದು ಕೂಡಾ ಜೀವಜಗತ್ತಿಗೆ ನಿಗೂಢವಾದ ವಿಷಯಗಳೇ. ದೇಹ ಮತ್ತು ಮನಸ್ಸುಗಳಿಗೆ ಒಂದಕ್ಕೊಂದು ಸಂಬಂಧವೇ ಇಲ್ಲ ಎಂದು ಒಮ್ಮೆ ಅನ್ನಿಸಿದರೆ ಮರುಕ್ಷಣವೇ ಅವು ಒಂದನ್ನೊಂದು ಬಿಟ್ಟು ಇರಲಾರವೇನೋ ಅನ್ನಿಸಿಬಿಡುತ್ತದೆ. ನೀನು, ಚೆರ್ಲಪಲ್ಲಿ ನರಸಿಂಹರೆಡ್ಡಿ, ಮಹಮ್ಮದ್ ಪೈಲ್ವಾನ್, ಕೃಷ್ಣ ಮನೋಹರ, ವೀರಾಂಜನೇಯರೆಡ್ಡಿ, ನಾನು ಮತ್ತು ರಕ್ತವನ್ನು ಊಟಕ್ಕೆ ನಂಚಿಕೊಳ್ಳುವ ಆ ಪ್ರತಾಪಸಿಂಹರೆಡ್ಡಿ ಎಲ್ಲರೂ ಯಾವುದೋ ಒಂದು ವೃತ್ತದಲ್ಲಿ ಒಬ್ಬರನ್ನೊಬ್ಬರು ಸುತ್ತಿಕೊಳ್ಳುತ್ತೇವೆ. ಮತ್ತೆ ಹಾಗೆ ನೋಡಿದರೆ ಪ್ರತಿಯೊಬ್ಬರೂ ಒಂದೊಂದು ಸ್ವತಂತ್ರ ಅಣುಗಳೇ. ದೃಶ್ಯ ಮತ್ತು ಅದೃಶ್ಯ ಸಂಗತಿಗಳ ನಡುವಿನ ಸಂಬಂಧವೇ ಒಂದು ಭೇದಿಸಲಾಗದ ವಿಸ್ಮಯದ ಸಂಗತಿ. ಇನ್ನರ್ಧ ಗಂಟೆಯಲ್ಲಿ ನಮ್ಮ ಆಸ್ಪತ್ರೆಯಲ್ಲಿ ಒಂದು ಹಾರ್ಟ್ ಟ್ರಾನ್ಸ್‌ಪ್ಲಾಂಟೇಶನ್ ಸರ್ಜರಿ ನಡೆಯುತ್ತದೆ. ಹಾರ್ಟ್ ಈಜ್ ಆನ್ ದಿ ವೇ. ಒಬ್ಬ ಮನುಷ್ಯನ ಹೃದಯವನ್ನು ಇನ್ನೊಬ್ಬ ಮನುಷ್ಯನ ದೇಹದಲ್ಲಿ ಜೋಡಿಸುವುದು ಸಾಮಾನ್ಯ ಸಂಗತಿಯೇನೂ ಅಲ್ಲ. ಹೃದಯವನ್ನು ಜೋಡಿಸಿದ ನಂತರ ಹೃದಯ ಜೋಡಿಸಿಕೊಂಡ ವ್ಯಕ್ತಿ ಹೃದಯವನ್ನು ನೀಡಿದ ವ್ಯಕ್ತಿಯಂತೆ ವರ್ತಿಸಲಾರ. ದೇಹವನ್ನು ಶಸ್ತ್ರಚಿಕಿತ್ಸೆಗೆ ಒಳಪಡಿಸಿದಂತೆ ಮನಸ್ಸನ್ನು ಶಸ್ತ್ರ ಚಿಕಿತ್ಸೆಗೆ ಒಳಪಡಿಸಲು ಸಾಧ್ಯವಾಗುವುದಿಲ್ಲ. ಒಂದಕ್ಕೊಂದು ವಿಷಯ ಕಾಂಪ್ಲಿಕೇಟೆಡ್ ಆಗ್ತಾ ಇದೆಯಲ್ವ. ಸದ್ಯಕ್ಕೆ ನಿನ್ನ ದೇಹ ಮತ್ತು ಮನಸ್ಸನ್ನು ಕೆಲಸದಲ್ಲಿ ಒಟ್ಟಿಗೆ ನೆಟ್ಟು ಪೂರೈಸಿಕೊಂಡು ಬಾ. ಬಿಡುವಾದಾಗ ಬೆಂಗಳೂರಿನಲ್ಲಿ ಭೇಟಿಯಾಗಿ ಮಾತಾಡೋಣ..." ಎಂದು ಜೀಮೂತವಾಹನ ಫೋನು ಇಡುವುದಕ್ಕೂ ರೂಮಿನ ಬೆಲ್ ಆಗುವುದಕ್ಕೂ ಒಂದೇ ಆಗಿತ್ತು.

ಎದ್ದು ಹೋಗಿ ಬಾಗಿಲು ತೆರೆದಾಗ ನರಸಿಂಹರೆಡ್ಡಿ ನಿಂತಿದ್ದರು. "ಒಳಕ್ಕೆ ಬನ್ನಿ..." ಎಂದು ಸ್ವಾಗತಿಸಿದ್ದೆ. ಒಳಕ್ಕೆ ಬಂದು ಸೋಫಾದ ಮೇಲೆ ಕುಳಿತುಕೊಳ್ಳುತ್ತಾ, "ವಿಶ್ವನಾಥ ವೇಮುಲಶಾಸ್ತ್ರಿ ಇಲ್ಲಿಗೆ ಬರುವುದನ್ನು ಕ್ಯಾನ್ಸಲ್ ಮಾಡಿದ್ದಾನೆ. ನಾಳೆ ಬೆಳಿಗ್ಗೆ ಒಂಬತ್ತು ಗಂಟೆ ಫ್ಲೈಟ್‌ಗೆ ನಾವೇ ವಿಶಾಖಪಟ್ಟಣಕ್ಕೆ ಹೋಗೋದಕ್ಕೆ ಏರ್ಪಾಡಾಗಿದೆ. ಅಲ್ಲಿಂದ ಅನ್ನಾವರಂಗೆ ಹೋಗೋಣ. ಅನ್ನಾವರಂನಲ್ಲಿ ಸತ್ಯನಾರಾಯಣಸ್ವಾಮಿ ದರ್ಶನ ಮಾಡಿವಿರಂತೆ. ಇಡೀ ಪ್ರಪಂಚದಲ್ಲಿ ನಮ್ಮ ಅನ್ನಾವರಂನ ಸತ್ಯನಾರಾಯಣ ಸ್ವಾಮಿ ತುಂಬಾ ಫೇಮಸ್ಸು. ಒಂದು ಸಾರಿ ಅನ್ನಾವರಂನ ಸತ್ಯನಾರಾಯಣ ಸ್ವಾಮಿ ದರ್ಶನ ಪಡೆದರೆ ಮತ್ತೆ ಮನೆಗಳಲ್ಲಿ ಸತ್ಯನಾರಾಯಣ ಸ್ವಾಮಿ ಪೂಜೆ ಮಾಡೋದು ಬೇಕೇ ಇಲ್ಲ ಅನ್ನೊ ನಂಬಿಕೆ ಕೂಡ ಇದೆ. ನಮ್ಮ ಜಿಲ್ಲೆಯಲ್ಲಿ ಮಳೆ ಬೆಳೆ ಚೆನ್ನಾಗಿರೋದು ಆ ಸ್ವಾಮಿಯ ಅನುಗ್ರಹದಿಂದಲೇ ಅನ್ನೊ ನಂಬಿಕೆ. ಸ್ವಾಮಿಗೆ ಏನಾದರೂ ಅಪಚಾರವಾದರೆ ಚಂಡಮಾರುತ ಗ್ಯಾರಂಟಿ. ಸ್ವಾಮಿಯ ಸನ್ನಿಧಿಯಲ್ಲಿ ನಮ್ಮ ಕುಟುಂಬಕ್ಕೆ ವಿಶೇಷ ದರ್ಶನದ ಸೌಲಭ್ಯವಿದೆ..." ಎಂದು ಹೇಳಿದ್ದರು.

"ವೇಮುಲಶಾಸ್ತ್ರಿ ಬರುತ್ತಾನೆಂದುಕೊಂಡಿದ್ದೆ..." ನಾನು ಎದುರಿಗಿನ ಸೋಫಾದಲ್ಲಿ ಕುಳಿತುಕೊಳ್ಳುತ್ತಾ ಹೇಳಿದೆ.

"ಅವನೇನೋ ಹೊರಟಿದ್ದ. ಆದರೆ ನಾಳೆ ಮತ್ತೆ ಅವನು ವಿಶಾಖಪಟ್ಟಣಕ್ಕೆ ವಾಪಸ್ಸು ಬರೋದರಿಂದ ನಾನೇ ಮಧ್ಯಾಹ್ನವೇ ಬೇಡವೆಂದು ಹೇಳಿದ್ದೆ. ರಾಜಮಹೇಂದ್ರಿ ಜೈಲಿನ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಫೋನು ಮಾಡಿದ್ದ. ನನ್ನ ದೂರದ ನೆಂಟ. ಗಂಟೆ ಹಿಂದೆ ಸೂಪರಿಂಟೆಂಡೆಂಟ್‌ನ